# ಹತ್ತನೇ ತರಗತಿ ಮಾದರಿ ಪ್ರಶ್ನೆ ಪತ್ರಿಕೆ (1)
# ಕನ್ನಡ ದ್ವಿತೀಯ ಭಾಷೆ
# ಪ್ರಶ್ನೆ ಪತ್ರಿಕೆ

**ಗರಿಷ್ಠ ಅಂಕ : ೮೦** **ಅವಧಿ : 2-30 ಗಂಟೆಗಳು**

**ಸೂಚನೆಗಳು :**

- ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
- ವಿಭಾಗ 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 53 ಅಂಕಗಳು
- ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು 12 ಅಂಕಗಳು
- ವಿಭಾಗ 'ಸಿ' ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ 15 ಅಂಕಗಳು
- ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಬೇಕು
- ವಸ್ತುನಿಷ್ಠ ಪ್ರಶ್ನೆಗಳಿಗೆ, ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
- ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

## ಭಾಗ – 'ಎ'

## ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 53 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದ ಉತ್ತರವನ್ನು ಬರೆಯಿರಿ.** **8X1=8**

1. ಗಿಳಿಯು ವಾಸವಾಗಿದ್ದ ಮರವು ಯಾವುದರ ಪ್ರಭಾವದಿಂದ ಒಣಗಿ ನಿಂತಿತು?
2. ಪಂಡಿತ ಪುಟ್ಟರಾಜಗವಾಯಿಯವರಿಗೆ ದೊರೆತಿರುವ ಮಧ್ಯಪ್ರದೇಶ ಸರಕಾರದ ಪ್ರತಿಷ್ಠಿತ ಪ್ರಶಸ್ತಿ ಯಾವುದು?
3. ಪುಟ್ಟರಾಜಗವಾಯಿರವರ ತಂದೆ, ತಾಯಿಯ ಹೆಸರೇನು?
4. ಗೋಪಾಲನು ಅಮ್ಮನನ್ನು ಹೊಸ ಪಂಚೆ ಬೇಕೆಂದು ಏಕೆ ಕೇಳಿದನು?
5. ಅಮ್ಮನು ಯಾರು ಕಾಡು ದಾಟಿಸುತ್ತಾರೆಂದು ಗೋಪಾಲನಿಗೆ ಹೇಳಿದಳು?
6. 'ಬಾಹುಬಲಿಗೆ ಭಯವಾಗುವುದಿಲ್ಲವೆ?' ಎಂದು ಮಗುವು ಅಜ್ಜನನ್ನು ಏಕೆ ಕೇಳಿತು?
7. ಯಾರ ಮನೆಗೆ ಕನ್ನಡಿ ಬೇಡವೆಂದು ಜನಪದರು ತಿಳಿಸಿದ್ದಾರೆ?
8. ಬಸವಣ್ಣನವರ ವಚನಗಳ ಅಂಕಿತ ಯಾವುದು?

**ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು, ಮೂರು ವಾಕ್ಯಗಳ ಉತ್ತರಗಳನ್ನು ಬರೆಯಿರಿ.** **11X2=22**

9. ಇಂದ್ರನಿಗೆ ಸಂತೋಷವನ್ನುಂಟು ಮಾಡಿದ ಗಿಳಿಯ ನುಡಿಗಳಾವುವು?
10. ಪುಟ್ಟರಾಜಗವಾಯಿಯವರು ರಚಿಸಿರುವ ಪ್ರಮುಖ ಕೃತಿಗಳಾವುವು?
11. ಪಶ್ಚಿಮ ಘಟ್ಟಗಳ ಪತನಕ್ಕೆ ಕಾರಣವಾದ ಯಾವುದಾದರೂ ನಾಲ್ಕು ಅಂಶಗಳನ್ನು ತಿಳಿಸಿರಿ.
12. ಪಶ್ಚಿಮ ಘಟ್ಟಗಳ ಪತನದಿಂದಾದ ಯಾವುದಾದರೂ ನಾಲ್ಕು ಪರಿಣಾಮಗಳನ್ನು ತಿಳಿಸಿರಿ.

13. ಮನೆಗಿಂತಲೂ ಬನವೇ ಸೊಗಸೆಂದು ಗೋಪಾಲನು ಹೇಳಲು ಕಾರಣವೇನು?

14. ಬಾಹುಬಲಿಯು ಘೋರ ತಪಸ್ಸು ಮಾಡಲು ಕಾರಣವೇನು?

15. ಸಿಡುಕು-ಮಿಡುಕನು ತೊರೆದು ಮೌನಿಯಾಗು ಎಂದು ಸಿಪಿಕೆಯವರು ಏಕೆ ತಿಳಿಸಿದ್ದಾರೆ?

16. 'ಮಗು' ಪದ್ಯದಲ್ಲಿ ವರ್ಣಿಸಿರುವಂತೆ ಮಾಟವಾಗಿರುವವು ಯಾವುವು?

17. ಮರ, ಧನ, ಹಸು ಮತ್ತು ರೂಪ ಇವುಗಳ ಇರುವಿಕೆ ಸಾರ್ಥಕವಾಗುವುದು ಯಾವಾಗ ಎಂದು ಅಕ್ಕಮಹಾದೇವಿ ತಿಳಿಸಿದ್ದಾರೆ?

18. ಸಾವಿತ್ರಿಯು ಗಂಡನ ಮನೆಯಲ್ಲಿ ಮೊದಲ ದಿನದ ಅಡುಗೆಯನ್ನು ಹೇಗೆ ಸಿದ್ಧಪಡಿಸಿದಳು?

19. ಅಕ್ಕನಿಂದ ತಿಳಿದು ಬಂದ ನಿಮಿತ್ಯ ಕೇಳಲು ಬಂದ ಹೆಂಗಸಿನ ವಿಚಾರಗಳೇನು?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಾಕ್ಯಗಳಲ್ಲಿ ಬರೆಯಿರಿ. 2X3=6**

20. "ಬೆಳೆಯ ಸಿರಿ ಮೊಳಕೆಯಲ್ಲಿ"

21. "ಇದ್ದೀ, ನೀನು ಇದ್ದೀ, ನೀನು ಇರಬೇಕು,"

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ವಾಕ್ಯಗಳಲ್ಲಿ ಬರೆಯಿರಿ. 2X3=6**

22. ಬಿ.ಪಿ. ರಾಧಾಕೃಷ್ಣ

23. ಎಂ. ಗೋಪಾಲಕೃಷ್ಣ ಅಡಿಗ

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಮಾಡಿರಿ. 1X3=3**

24. ಮೈಯಕೊಡವಿ______________
____ಬಗೆಯ_______________
_____________ಚಿಗಿತ_______
__________________ನಡೆದಂತಿರೆ

**ಅಥವಾ**

ಕೊರಡ_________________
________ಹೊಸ__________
ಕುಕಿಲ__________________
________________ಮತ್ತೇರಿದೆ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳ ಉತ್ತರಗಳನ್ನು ಬರೆಯಿರಿ. 2X4=8**

25. ಪೋಲೀಸರು ಅಜ್ಜನನ್ನು ಪೋಲೀಸ್ ಜೀಪಿನಲ್ಲಿ ಕರೆದುಕೊಂಡು ಹೋದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

**ಅಥವಾ**

ಮುರುಗೋಡ ಭೀಮ್ಯಾನು ತನ್ನ ಗುರುಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

26. ಅರ್ಜುನ ಮತ್ತು ಉತ್ತರ ಇವರ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

**ಅಥವಾ**

ಉತ್ತರ ಕುಮಾರನ ಪುಕ್ಕಲುತನವನ್ನು ಕುಮಾರವ್ಯಾಸನು ಹೇಗೆ ಚಿತ್ರಿಸಿದ್ದಾನೆ? ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

## ಭಾಗ – 'ಬಿ'

## ಅನ್ವಯಿಕ ವ್ಯಾಕರಣ – 12 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಕೆಳಗೆ ಕೊಟ್ಟಿರುವ ನಾಲ್ಕು ಪರ್ಯಾಯಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**

**12X1=12**

27. **'ಅಚ್ಚರಿ' ಪದದ ತತ್ಸಮ ರೂಪ :**

(ಎ) ಆಶ್ಚರ್ಯ (ಸಿ) ಬೆರಗು

(ಬಿ) ಅದ್ಭುತ (ಡಿ) ಸೋಜಿಗ

28. **'ಅಂಬುಜ' ಪದದ ಅರ್ಥ :**

(ಎ) ನೀರು (ಸಿ) ತಾವರೆ

(ಬಿ) ವಿಷ್ಣು (ಡಿ) ಆಕಾಶ

29. **ನಾನು, ನೀನು, ಅವನು, ಅವಳು ಎಲ್ಲರೂ ಸೇರಿ ಆಟವಾಡೋಣ. ಈ ವಾಕ್ಯದಲ್ಲಿ ಉತ್ತಮಪುರುಷಕ್ಕೆ ಉದಾಹರಣೆ :**

(ಎ) ನಾನು, (ಸಿ) ಅವನು,

(ಬಿ) ನೀನು, (ಡಿ) ಅವಳು.

30. **'ಅನುಕರಣಾವ್ಯಯಕ್ಕೆ' ಉದಾಹರಣೆ ಇದು :**

(ಎ) ಮನೆಮಠ (ಸಿ) ಮತ್ತೆಮತ್ತೆ

(ಬಿ) ಹಿಂದೆಮುಂದೆ (ಡಿ) ಪಟಪಟ

31. **ಕೋಟಿ+ಅಂತರ ಸಂಧಿಮಾಡಿ ಬರೆದ ರೂಪ :**

(ಎ) ಕೋಟ್ಯಾಂತರ (ಸಿ) ಕೋಟ್ಯಂತರ

(ಬಿ) ಕೋಟಿಅಂತರ (ಡಿ) ಕೋಟಂತರ

32. **'ಹಿಮ್ಮಡಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :**

(ಎ) ದ್ವಂದ್ವ (ಸಿ) ಗಮಕ

(ಬಿ) ಅಂಶಿ (ಡಿ) ದ್ವಿಗು

33. **ತೃತೀಯಾ ವಿಭಕ್ತಿಪ್ರತ್ಯಯ ಯಾವುದೆಂದರೆ:**

(ಎ) ಅನ್ನು (ಸಿ) ದೆಸೆಯಿಂದ

(ಬಿ) ಇಂದ (ಡಿ) ಅಲ್ಲಿ

34. **ಈ ಕೆಳಗಿನವುಗಳಲ್ಲಿ ಅನುನಾಸಿಕಾಕ್ಷರಕ್ಕೆ ಉದಾಹರಣೆ :**

(ಎ) ಅಂಅಃ (ಸಿ) ಙಞಣನಮ

(ಬಿ) ಘಝಢಧಭ (ಡಿ) ಆಈಊಏಔ

35. **ಒಂದು ಹ್ರಸ್ವ ಅಕ್ಷರದ ಉಚ್ಚಾರಕ್ಕೆ ಬೇಕಾದ ಕಾಲವನ್ನು ಹೀಗೆಂದು ಕರೆಯುತ್ತಾರೆ :**

(ಎ) ಮಾತ್ರೆ (ಸಿ) ಲಯ

(ಬಿ) ಗಣ (ಡಿ) ಪ್ರಾಸ

36. **ಈ ಕೆಳಗಿನವುಗಳಲ್ಲಿ ರೂಪಕಾಲಂಕಾರಕ್ಕೆ ಉದಾಹರಣೆ**

(ಎ) 'ದೀಪದೆದುರಿಗೆ ತಿಮಿರ ಸರಿವಂತೆ' (ಸಿ) 'ರವಿಕರಕೆ ಕರಗುವಿಬ್ಬನಿವೊಲು'

(ಬಿ) 'ಸೇನಾಸಾಗರ' (ಡಿ) 'ಸಾಗರದಂತೆ ಸೇನೆ'

37. **ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಇರಬೇಕಾದ ಲೇಖನ ಚಿಹ್ನೆ :**

(ಎ) ಅಲ್ಪವಿರಾಮ (ಸಿ) ಪೂರ್ಣವಿರಾಮ

(ಬಿ) ಪ್ರಶ್ನಾರ್ಥಕ (ಡಿ) ಅರ್ಧವಿರಾಮ

38. **'ಜೋಡುನುಡಿ'ಗೆ ಉದಾಹರಣೆ ಇದು :**

(ಎ) ನೋವು ನಲಿವು (ಸಿ) ದ್ವೇಷಸಾಧಿಸು

(ಬಿ) ಹೊಂಚುಹಾಕು (ಡಿ) ಚರ್ರನೆ ಚಾರು

# ಭಾಗ – 'ಸಿ'

## ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ 15 ಅಂಕಗಳು

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1X4=4**

ಬೋಧಿಸತ್ವನ ಅನೇಕ ಅವತಾರಗಳಲ್ಲಿ ಚಂದಿರನಂತೆ ಹೊಳೆವ, ಬ್ರಹ್ಮದತ್ತ ಎಂಬ ಬಿಳಿ ಬಣ್ಣದ ಆನೆಯ ಅವತಾರವೂ ಒಂದು. ಅದರ ಜೊತೆಗಿದ್ದ ಆನೆಗಳು ಮರವನ್ನು ಮುರಿಯುವುದು, ಇತರ ಪ್ರಾಣಿಗಳನ್ನು ಹಿಂಸಿಸುವುದು ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದವು. ಬ್ರಹ್ಮದತ್ತ ಮಾತ್ರ ಯಾರಿಗೂ ತೊಂದರೆ ಕೊಡದೆ, ಎಲ್ಲರಿಗೂ ತನ್ನ ಕೈಲಾದ ಸಹಾಯ ಮಾಡುತ್ತಾ ಬೇರೆ ಆನೆಗಳಿಗಿಂತ ಭಿನ್ನವಾಗಿತ್ತು.

ಒಮ್ಮೆ ದಾರಿ ತಪ್ಪಿದ, ಕಾಶಿಗೆ ಹೋಗುತ್ತಿದ್ದ ಒಬ್ಬ ದಾರಿಹೋಕನಿಗೆ ಅಭಯವನ್ನು ನೀಡಿ ತನ್ನ ಮನೆಗೆ ಕರೆದುಕೊಂಡು ಬಂದು ಹಣ್ಣು ಹಂಪಲುಗಳನ್ನು ನೀಡಿ ಉಪಚರಿಸಿತು. ಕೃತಘ್ನನಾದ ಆಸೆಬುರುಕ ದಾರಿ ಹೋಕನ ಕಣ್ಣು ಬ್ರಹ್ಮದತ್ತನ ಬಲವಾದ ದಂತದ ಮೇಲೆ ಬಿತ್ತು. ಆತ ಬ್ರಹ್ಮದತ್ತನ ಅನುಮತಿಯನ್ನೂ ಪಡೆಯದೆ ಅದನ್ನು ಮುರಿದು ಕೊಳ್ಳಲು ಪ್ರಯತ್ನಿಸಿದನು.

39. ಬ್ರಹ್ಮದತ್ತ ಯಾರು ?

40. ಬ್ರಹ್ಮದತ್ತನ ಸಹಪಾಠಿ ಆನೆಗಳು ಏನು ಮಾಡುತ್ತಿದ್ದವು?

41. ಬ್ರಹ್ಮದತ್ತ ಬೇರೆ ಆನೆಗಳಿಗಿಂತ ಹೇಗೆ ಭಿನ್ನವಾಗಿತ್ತು?

42. ಬ್ರಹ್ಮದತ್ತ ಆನೆಯು ದಾರಿಹೋಕನಿಗೆ ಹೇಗೆ ಉಪಚರಿಸಿತು?

43. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1X3=3**

- ಮಾಡಿದ್ದುಣ್ಣೋ ಮಹರಾಯ.
- ಆಳಾಗಿ ದುಡಿಯಬಲ್ಲವ ಅರಸಾಗಿ ಆಳಬಲ್ಲ.
- ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ.

44. ಸಾಲಿಗ್ರಾಮದ ಸರಕಾರಿ ಪ್ರೌಢಶಾಲೆಯ 10ನೇ ತರಗತಿ 'ಎ' ವಿಭಾಗದಲ್ಲಿ ಓದುತ್ತಿರುವ ನೀವು ಮಂಜುನಾಥ/ಮಾಲ ಎಂದು ಭಾವಿಸಿ ಬೆಂಗಳೂರಿನ ಕತ್ತರಿಗುಪ್ಪ 2ನೇ ಹಂತದ 'ಶ್ರೀನಿವಾಸ'ದಲ್ಲಿ ವಾಸವಾಗಿರುವ ನಿಮ್ಮ ಗೆಳೆಯ/ಗೆಳತಿ ಮಂಥನ್‌ನನ್ನು/ಮಾನಸಳನ್ನು ನಿಮ್ಮ ಊರಿನ ಜಾತ್ರೆಗೆ ಆಹ್ವಾನಿಸಿ ಪತ್ರ ಬರೆಯಿರಿ.

**ಅಥವಾ**

ಪುತ್ತೂರಿನ ಗಾಂಧೀಜಿ ಸ್ಮಾರಕ ಮಾದರಿ ಪ್ರೌಢಶಾಲೆಯ 10ನೇ ತರಗತಿ 'ಬಿ' ವಿಭಾಗದಲ್ಲಿ ಓದುತ್ತಿರುವ ನೀವು, ಶಿಶಿರ.ಪಿ. ಭಟ್/ಗೌರಿಶ್ರೀ ಹೊಳ್ಳ ಎಂದು ಭಾವಿಸಿ ನಿಮ್ಮ ಶಾಲೆಯಲ್ಲಿ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ದಿನ ಪತ್ರಿಕೆಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ. **1X4=4**

45. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** **1X4=4**

- ಪರಿಸರ ಮಾಲಿನ್ಯ.
- ಉದ್ಯಾನವನಗಳು.
- ಮಕ್ಕಳ ದಿನಾಚರಣೆ.

**********************

ಸಮಾಧಿ ಪತ್ರಿಕೆ